ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಅಕ್ರಮ ಜಾಹೀರಾತುಗಳು ಪ್ರದರ್ಶನವಾಗುತ್ತಿರುವ ಬಗ್ಗೆ

ಡಾ|| ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು ) :-

737 (1015) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ 03 ವರ್ಷಗಳಿಂದ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಜಾಹೀರಾತು ಪ್ರದರ್ಶನದಿಂದ ಸಂಗ್ರಹವಾಗಿರುವ ಹಣವೆಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಅಕ್ರಮ ಜಾಹೀರಾತುಗಳು ಪ್ರದರ್ಶವಾಗುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಪತ್ತೆ ಹಚ್ಚಲಾದ ಅಂತಹ ಪ್ರಕರಣಗಳ ಸಂಖ್ಯೆ ಎಷ್ಟು ; ದಂಡ ವಿಧಿಸಿದ ಪ್ರಕರಣಗಳೆಷ್ಟು; ದಂಡದಿಂದ ಸಂಗ್ರಹಿಸಿದ ಮೊತ್ತವೆಷ್ಟು ;

(ಇ) ಜಾಹೀರಾತು ಪ್ರದರ್ಶನದಿಂದ ಹೆಚ್ಚಿನ ವರಮಾನ ಗಳಿಸುವ ಸಾಧ್ಯತೆ ಇದ್ದರೂ ಅಧಿಕಾರಿಗಳು ಹಣ ಸಂಗ್ರಹಿಸುವಲ್ಲಿ ವಿಫಲವಾಗುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ;

(ಈ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಯಾವ ಕಾರ್ಯ ಸೂಚಿಯನ್ನು ಅಳವಡಿಸಿಕೊಳ್ಳಲು ಸರ್ಕಾರವು ಆಲೋಚಿಸಿದೆ ? (ಸಂಪೂರ್ಣ ವಿವರ ನೀಡುವುದು)